**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ:: 94/2023**

**ಸಾಕ್ಷಿದಾರರ ಹೆಸರು** : ಸಿ ಆರ್ ಮೋಹನ್ ಕುಮಾರ್ **PW-02**

**ತಂದೆಯ ಹೆಸರು** : ಸಿ.ಸಿ ರಾಜಣ್ಣ

**ವಯಸ್ಸು** : 52

**ಉದ್ಯೋಗ** : ಎ.ಎಸ್. ಐ, ಶೃಂಗೇರಿ ಪೋಲೀಸ್ ಠಾಣೆ

**ವಾಸಸ್ಥಳ** : ಶೃಂಗೇರಿ.

**ದಿನಾಂಕಃ 23-01-26 ರಂದು ಪ್ರಮಾಣವಚನ ಬೋಧಿಸಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿ ಸಾಕ್ಷಿಯ ವಿಚಾರಣೆ )**

**:: ಮುಖ್ಯ ವಿಚಾರಣೆ :: ಮಾನ್ಯ ಎಪಿಪಿಯವರಿಂದ ::**

ನಾನು 2024 ಆಗಸ್ಟ್ ತಿಂಗಳಿನಿಂದ ಶೃಂಗೇರಿ ಪೋಲೀಸ್ ಠಾಣೆಯಲ್ಲಿ ಎ.ಎಸ್. ಐ. ಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕಃ27-11-2024 ರಂದು ಈ ಪ್ರಕರಣದ ಆರೋಪಿಯಾದ ದಿನೇಶ್ ಬಿನ್ ಸಾಧುಶೆಟ್ಟಿ, 38 ವರ್ಷ, ವಾಸ-ಮೀಗಾ ಗ್ರಾಮ, ಕೆರೆಕುಡಿಗೆ, ಧರೆಕೊಪ್ಪ ಅಂಚೆ, ಶೃಂಗೇರಿ ತಾ. ರವರ ಉದ್ಘೋಷಣಾ ಪತ್ರವನ್ನು ಜಾರಿ ಮಾಡಲು ನನ್ನನ್ನು ನೇಮಕ ಮಾಡಿದ್ದು, ಈ ಸಂಬಂಧ ನಾನು ಸದರಿ ಗ್ರಾಮಕ್ಕೆ ದಿಃ 27-11-2024 ರಂದು ಹೋಗಿದ್ದು, ಈ ಹಿಂದೆ ಆರೋಪಿ ವಾಸವಿದ್ದ ಮೇಲ್ಕಂಡ ವಿಳಾಸದಲ್ಲಿ ಅವರ ಮನೆಯ ಮುಂಭಾಗ ಪಂಚ ಸಾಕ್ಷಿದಾರರಾದ ಆದರ್ಶ ತಂದೆ ರಮೇಶ ಮತ್ತು ಶ್ರೀನಿವಾಸ ತಂದೆ ಮಲ್ಲಪ್ಪ ಶೆಟ್ಟಿ ರವರಿಗೆ ಈ ಪ್ರಕರಣದ ವಿಚಾರ ತಿಳಿಸಿ ಸದರಿ ಪ್ರಕರಣದಲ್ಲಿ ತಲೆಮರೆಸಿಕೊಂಡ ದಿನೇಶ್ ರವರು ಈವರೆಗೂ ಪೊಲೀಸರಿಗೆ ಸಿಕ್ಕಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದ ಕಾರಣ ಅವರು ಊರಿಗೆ ಬಂದರೆ ಪೊಲೀಸ್ ಠಾಣೆಗಾಗಲೀ ಅಥವಾ ನ್ಯಾಯಾಲಯಕ್ಕಾಗಲೀ ಹಾಜರಾಗುವಂತೆ ತಿಳಿಸಿ ನಮ್ಮ ಮೈಕ್ ನಿಂದ ಪ್ರಚಾರ ಮಾಡಿ ಸುತ್ತೋಲೆ ಹೊರಡಿಸಿರುತ್ತೇವೆ.

ಸದರಿ ಉದ್ಘೋಷಣಾ ಪ್ರತಿಯನ್ನು ಆರೋಪಿ ವಾಸವಿದ್ದ ಮನೆಯ ಗೋಡೆಗೆ ಪಂಚರಾದ ಆದರ್ಶ ತಂದೆ ರಮೇಶ ಮತ್ತು ಶ್ರೀನಿವಾಸ ತಂದೆ ಮಲ್ಲಪ್ಪ ಶೆಟ್ಟಿ ರವರ ಸಮಕ್ಷಮ ಅಂಟಿಸಿರುತ್ತೇನೆ, ಇನ್ನೊಂದು ಪ್ರತಿಯನ್ನು ಅದೇ ಗ್ರಾಮದಲ್ಲಿರುವ ಸರ್ಕಾರಿ ಅಂಗನವಾಡಿ ಸೂಚನಾ ಫಲಕ ಹಾಗೂ ಧರೆಕೊಪ್ಪ ಗ್ರಾಮ ಪಂಚಾಯ್ತಿ ಫಲಕಕ್ಕೆ ಅಂಟಿಸಿರುತ್ತೇನೆ.

ಸದರಿ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ. ಸಾಕ್ಷಿಯು ಉದ್ಘೋಷಣಾ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು, ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಮಹಜರನ್ನು ಬೆಳಗ್ಗೆ 11 ರಿಂದ 12 ಗಂಟೆಯವರೆಗೆ ಸ್ಥಳದಲ್ಲಿಯೇ ಬರೆದಿರುತ್ತೇನೆ. ಸಾಕ್ಷಿಯು 1 ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -8 ಎಂದು ಗುರುತಿಸಲಾಯಿತು. ಸದರಿ ಆರೋಪಿಗೆ ಸಂಬಂಧಿಸಿ ಯಾವುದೇ ಆಸ್ತಿ ಇರುವುದಿಲ್ಲ. ಸದರಿ ಆರೋಪಿಗೆ ಸಂಬಂಧಿಸಿದ ಆಸ್ತಿ ಬಗ್ಗೆ ತಹಶೀಲ್ದಾರ್ ರವರಿಗೆ ಮನವಿ ನೀಡಿರುತ್ತೇನೆ.

ತದ ನಂತರ ಆರೋಪಿತರಿಗೆ ತನ್ನ ಗ್ರಾಮದಲ್ಲಿ ಯಾವುದೇ ಸ್ಥಿರಾಸ್ಥಿ ಮತ್ತು ಚರಾಸ್ಥಿ ಇಲ್ಲದೇ ಇರುವ ಬಗ್ಗೆ ಶೃಂಗೇರಿ ತಾಲ್ಲೂಕು ತಹಸೀಲ್ದಾರ್ ರವರು ನೀಡಿದ ದಿಃ20-12-2024 ರ ವರದಿಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

**ಮುಂದುವರಿದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.